# ಕರ್ನಾಟಕ ಲೋಕ ಸೇವಾ ಆಯೋಗ,

## "ಉದ್ಯೋಗ ಸೌಧ ಬೆಂಗಳೂರು-560001"

ಸಂಖ್ಯೆ:ಪಿಎಸ್ ಸಿ 123 ಆರ್ ಟಿ ಬಿ(2)/2024-25/661 ದಿನಾಂಕ:22-07-2024

### ತಿದ್ದುಪಡಿ ಅಧಿಸೂಚನೆ

ಆಯೋಗದ ಅಧಿಸೂಚನೆ ಸಂ: ಪಿಎಸ್‌ಸಿ 505 ಆರ್‌ಟಿಬಿ-2/2023-24/3496 ಮತ್ತು ಪಿಎಸ್‌ಸಿ 506 ಆರ್ ಟಿಬಿ-2/2023-24/3497 ರಡಿ ದಿ:15-03-2024 ರಂದು ಪದವಿ ಮಟ್ಟದ ವಿದ್ಯಾರ್ಹತೆಯನ್ನು ಹೊಂದಿರುವ ವಿವಿಧ ಇಲಾಖೆಗಳಲ್ಲಿನ ವಿವಿಧ ಗ್ರೂಪ್ 'ಸಿ' 60 + 16 (ಹೈಕ) ಹುದ್ದೆಗಳನ್ನು ವೃಂದವಾರು ಪ್ರತ್ಯೇಕವಾಗಿ ಅಧಿಸೂಚಿಸಿ ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಅಧಿಸೂಚನೆಗಳಲ್ಲಿನ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ 50 + 13(ಹೈಕ) ಹುದ್ದೆಗಳಿಗೆ ಇಲಾಖೆಯ ಪ್ರಸ್ತಾವನೆಯಂತೆ ನಿಗದಿಪಡಿಸಲಾಗಿದ್ದ ವಿದ್ಯಾರ್ಹತೆಯ ಕೋರ್ಸ್‌ಗಳಲ್ಲಿ B.Com, B.Sc., BBA, BE ಪದವಿಗಳನ್ನು ಮಾತ್ರ ಪರಿಗಣಿಸಿ, ಅರ್ಜಿ ಸಲ್ಲಿಸಲು ದಿ:29-04-2024 ರಿಂದ 10-06-2024 ರವರೆಗೆ ಅವಕಾಶ ನೀಡಲಾಗಿತ್ತು. ಪ್ರಸ್ತುತ ಸರ್ಕಾರದ ಪತ್ರ ದಿನಾಂಕ: 20-06-2024 ರಲ್ಲಿ ಸದರಿ ಹುದ್ದೆಗಳಿಗೆ BBM ಮತ್ತು B.Tech ಪದವಿಗಳನ್ನು ಸಹ ಪರಿಗಣಿಸಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಕೋರಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಅಧಿಸೂಚನೆಗಳಲ್ಲಿನ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ 50+13(ಹೈಕ) ಹುದ್ದೆಗಳಿಗೆ **BBM ಮತ್ತು B.Tech** ಪದವಿಗಳನ್ನು ಪರಿಗಣಿಸಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಅರ್ಜಿ ಸಲ್ಲಿಸಲು ಈ ಕೆಳಗಿನಂತೆ ದಿನಾಂಕವನ್ನು ವಿಸ್ತರಿಸಿದೆ.

| | |
|---|---|
| ಅರ್ಜಿ ಸಲ್ಲಿಸಲು ವಿಸ್ತರಿಸಿದ ಪ್ರಾರಂಭಿಕ ದಿನಾಂಕ | 23-07-2024 |
| ಅರ್ಜಿ ಸಲ್ಲಿಸಲು ವಿಸ್ತರಿಸಿದ ಕೊನೆಯ ದಿನಾಂಕ | 01-08-2024 |
| ಶುಲ್ಕ ಪಾವತಿಸಲು ವಿಸ್ತರಿಸಿದ ಕೊನೆಯ ದಿನಾಂಕ | 01-08-2024 |

ಮುಂದುವರೆದು, ಮೇಲ್ಕಂಡ ಅಧಿಸೂಚನೆಗಳಲ್ಲಿನ ಇತರೆ ಇಲಾಖೆಗಳ ಎಲ್ಲಾ ಗ್ರೂಪ್ ಸಿ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಉಳಿದಂತೆ ದಿನಾಂಕ:15-03-2024ರ ಅಧಿಸೂಚನೆಗಳಲ್ಲಿನ ಇತರೆ ಷರತ್ತು/ಸೂಚನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/-
(ಡಾ. ರಾಕೇಶ್ ಕುಮಾರ್ .ಕೆ)
ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ